ಅ) "ವಾರಾಹಿ ಯೋಜನೆ"ಗೆ 2003–04ರ ಸಾಲಿನ ಮುಂಗಡ ಪತ್ರದಲ್ಲಿ ಯೋಜನೆ ಮತ್ತು ಯೋಜನೇತರದಲ್ಲಿ ತೆಗೆದಿರಿಸಿದ ಹಣದ ವಿವರ ನೀಡುವುದು

ಆ) ಇವುಗಳಲ್ಲಿ ಸಿಬ್ಬಂದಿ ಮತ್ತು ಕಛೇರಿ ವೆಚ್ಚ ಹಾಗೂ ಕಾಮಗಾರಿಗಳಿಗಾಗಿ (2003–04ರ ಸಾಲಿನಲ್ಲಿ) ಎಂಗಡಿಸಿದ ಹಣವೆಷ್ಟು:

ಇ) 1979ರಲ್ಲಿ ಪ್ರಾರಂಭವಾದ ಈ ಕಾಮಗಾರಿ ಪೂರ್ತಿಗೊಳಿಸಲು ಇನ್ನು ಎಷ್ಟು ಕಾಲಾವಕಾಶ ಬೇಕು.

ಈ) ಈ ಯೋಜನೆಯನ್ನು "ಕರ್ನಾಟಕ ನೀರಾವರಿ ನಿಗಮ" ಎತ್ತಿಕೊಳ್ಳುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು: ಅವು ಯಾವ ಹಂತದಲ್ಲಿದೆ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ವಾರಾಹಿ ಯೋಜನೆಗೆ 2003–04ನೇ ಸಾಲಿನ ಮುಂಗಡ ಪತ್ರದಲ್ಲಿನ 103.37 ಲಕ್ಷ ರೂ.ಗಳ ಅನುದಾನ ಒಳವಡಿಸಲಾಗಿದೆ. ಈ ಯೋಜನೆಗಾಗಿ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಆಯವ್ಯಯದಲ್ಲಿ ಅನುದಾನ ಒಳವಡಿಸಿರುವುದಿಲ್ಲ.

ಆ) ವಾರಾಹಿ ಯೋಜನೆಗೆ 2003–04ನೇ ಸಾಲಿಗೆ ಒದಗಿಸಲಾದ ಒಟ್ಟು ಅನುದಾನ ರೂ. 103.37 ಲಕ್ಷ ಈ ಪೈಕಿ ಸಿಬ್ಬಂದಿ ಹಾಗೂ ಕಛೇರಿ ವೆಚ್ಚಕ್ಕಾಗಿ ರೂ. 103.32 ಲಕ್ಷಗಳ ಅವಶ್ಯಕತೆ ಇರುತ್ತದೆ.

ಇ) ಹಾಲಿ ಈ ಯೋಜನೆಯನ್ನು ರಾಜ್ಯ ಜಲ ನೀತಿ ಅನ್ವಯ ಡಿಸೆಂಬರ್ 2005 ರೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.

ಈ) ವಾರಾಹಿ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮದ ಮೂಲಕ ಕಾರ್ಯ ಗತಗೊಳಿಸುವ ಬಗ್ಗೆ ಸರ್ಕಾರ ತಾತ್ವಿಕ ನಿರ್ಣಯ ಮಾಡಿದೆ.

ವರಾಹಿ ಯೋಜನೆಗೆ ಬಿಡುಗಡೆಯಾದ ಹಣ

3235 (3653) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಾರಾಹಿ ಯೋಜನೆಯಿಂದ ಎಷ್ಟು ಹೆಕ್ಟೇರ್ ಭೂಮಿಗೆ ನೀರಾವರಿ ಲಭ್ಯವಾಗುವುದು.

ಆ) ಪ್ರಸ್ತುತ ಈ ವಾರಾಹಿ ಯೋಜನೆಯಲ್ಲಿ ಆಗಿರುವ ಕಾಮಗಾರಿಗಳಿಂದ ಎಷ್ಟು ಹೆಕ್ಟೇರ್ ಭೂಮಿಗೆ ನೀರು ಲಭ್ಯವಾಗಿದೆ:

ಇ) ಈವರೆಗೆ ಈ ವಾರಾಹಿ ಯೋಜನೆಗೆ (2003 ಮಾರ್ಚ್ ಅಂತ್ಯದವರೆಗೆ) ಮಾಡಲಾದ ಖರ್ಚು (ಬಿಡುಗಡೆ ಆಗಿರುವ ಹಣ) ಎಷ್ಟು: ಗುತ್ತಿಗೆದಾರರಿಗೆ ಪಾವತಿ ಆಗಬೇಕಾಗಿರುವ ಹಣವೆಷ್ಟು: ವಿವರ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ವಾರಾಹಿ ಯೋಜನೆಯಿಂದ ಸುಮಾರು 15,702 ಹೆಕ್ಟೇರ್ (38,800 ಎಕರೆ) ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲುವ ಗುರಿ ಹೊಂದಲಾಗಿದೆ.

ಆ) ಪ್ರಸ್ತುತ ಈ ಯೋಜನೆಯಿಂದ ನೀರಾವರಿಗಾಗಿ ಇದುವರೆವಿಗೂ ನೀರು ಒದಗಿಸಿರುವುದಿಲ್ಲ. ಆದರೆ ವಾರಾಹಿ ಯೋಜನೆಯ ಅಡಿಯಲ್ಲಿ ಪ್ರಗತಿಯಲ್ಲಿರುವ ವಾರಾಹಿ ಏತ

ನೀರಾವರಿಯ ಕಾಮಗಾರಿಗಳು ಶೇಕಡ 80 ರಷ್ಟು ಪೂರ್ಣಗೊಳಿಸಿದ್ದು, ಸುಮಾರು 2723 ಹೆಕ್ಟೇರ್ (6728 ಎಕರೆ) ಭೂಮಿಗೆ ಶೀಘ್ರವಾಗಿ ನೀರೊದಗಿಸಲು ಯೋಜಿಸಲಾಗಿದೆ.

ಇ) ವಾರಾಹಿ ನೀರಾವರಿ ಯೋಜನೆಗೆ ಮಾರ್ಚ್ 2003ರ ಅಂತ್ಯಕ್ಕೆ ಕಾಮಗಾರಿಗಾಗಿ ಆಗಿರುವ ವೆಚ್ಚ ರೂ. 2723.85 ಲಕ್ಷಗಳು ಹಾಗೂ ಸಿಬ್ಬಂದಿ ವೆಚ್ಚ ಇತ್ಯಾದಿಗಳನ್ನು ಒಳಗೊಂಡಂತೆ ಒಟ್ಟು ರೂ. 3260.81 ಲಕ್ಷಗಳನ್ನು ವ್ಯಯ ಮಾಡಲಾಗಿದೆ. ವಾರಾಹಿ ಯೋಜನೆಗೆ ಮಾರ್ಚ್ ಅಂತ್ಯದವರೆಗೆ ಬಿಡುಗಡೆಯಾದ ಹಣ ಒಟ್ಟು ರೂ. 3260.81 ಲಕ್ಷಗಳು. ಈ ಯೋಜನೆಯಲ್ಲಿ ಮಾರ್ಚ್ 2003ರ ಅಂತ್ಯಕ್ಕೆ ರೂ. 208.42 ಲಕ್ಷಗಳನ್ನು ಗುತ್ತಿಗೆದಾರರಿಗೆ ಪಾವತಿಸುವ ಬಿಲ್ಲುಗಳು ಬಾಕಿ ಇರುತ್ತವೆ.

ಅಂಗನವಾಡಿ ಶಿಕ್ಷಕಿಯರಿಗೆ ಮತ್ತು ಸಹಾಯಕಿಯರಿಗೆ ಹೆಚ್ಚಿಸಲಾದ ಗೌರವಧನ

3236 (3655) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003-04ರ ಸಾಲಿನ ಮುಂಗಡಪತ್ರದಲ್ಲಿ ಅಂಗನವಾಡಿ ಸಹಾಯಕಿ ಮತ್ತು ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರ ಘೋಷಿಸಿದ ಹೆಚ್ಚುವರಿ ಗೌರವಧನ ಎಷ್ಟು; ವಿವರ ನೀಡುವುದು;

ಆ) ಈ ಹೆಚ್ಚುವರಿ ಗೌರವಧನ ಈವರೆಗೆ ಬಿಡುಗಡೆ ಆಗಿದೆಯೇ:

ಇ) ಆಗಿಲ್ಲವಾದರೆ ಎಂದು ಬಿಡುಗಡೆ ಮಾಡಲಾಗುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ ರೂ. 200/- ಹಾಗೂ ಸಹಾಯಕಿಯರಿಗೆ ರೂ. 100/- ಗಳ ಹೆಚ್ಚುವರಿ ಗೌರವಧನ ಪ್ರಸ್ತಾಪಿಸಲಾಗಿದೆ.

ಆ) ಇಲ್ಲ.

ಇ) ಈ ಕುರಿತು ಸರ್ಕಾರಿ ಆದೇಶ ಸದ್ಯದಲ್ಲಿಯೇ ಹೊರಡಿಸಲಾಗುವುದು.

ರಾಜ್ಯದಲ್ಲಿ ಕರಾವಳಿ ಉದ್ದಕ್ಕೂ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಜೋಡಣೆ

3237 (3656) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕರಾವಳಿ ಉದ್ದಕ್ಕೂ ಇರುವ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳನ್ನು ಜೋಡಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆ ಇದೆಯೇ:

ಆ) ಈ ಬಗ್ಗೆ ಯಾವುದೇ ಅಧ್ಯಯನಗಳನ್ನು ನಡೆಸಲಾಗಿದೆಯೇ:

ಇ) ನಡೆಸಲಾಗಿದ್ದರೆ, ಸರ್ಕಾರ ತೆಗೆದುಕೊಂಡು ನಿಲುವೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕರಾವಳಿ ಜಿಲ್ಲೆಗಳಲ್ಲಿ ಹರಿಯುವ ಅನೇಕ ಪಶ್ಚಿಮವಾಹಿನಿ ನದಿಗಳನ್ನು ಜೋಡಣೆ ಮಾಡುವ ಮತ್ತು ಇವುಗಳ ನೀರನ್ನು ಉಪಯುಕ್ತವಾಗಿ ಬಳಸುವ ಪ್ರಸ್ತಾವನೆಗಳ ಬಗ್ಗೆ ಅಧ್ಯಯನ ನಡೆಸಲು ದಿನಾಂಕ: 19.09.2000 ರಂದು ಸರ್ಕಾರವು ಕ್ಯಾಪ್ಟನ್:ಎಸ್. ರಾಜಾರಾವ್ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿಯು ಇದರ ಬಗ್ಗೆ ಪರಿಶೀಲನೆ ನಡೆಸುತ್ತಿದೆ.

ಆ) ಅಧ್ಯಯನಗಳು ಪ್ರಗತಿಯಲ್ಲಿದ್ದು ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ಇ) ಅಧ್ಯಯನಗಳು ಪೂರ್ಣಗೊಂಡಿರುವುದಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.